# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC :11/2024**

**CW5**

**PW9**

| | | |
|---|---|---|
| ಸಾಕ್ಷಿಯ ಹೆಸರು | ಃ | ದದುವಾ ಹಂಸ್ದಾ |
| ತಂದೆ ಹೆಸರು | ಃ | ಗೂಂಗಾ ಹಂಸ್ದಾ |
| ಪ್ರಾಯ | ಃ | 29 ವರ್ಷ |
| ಉದ್ಯೋಗ | ಃ | ನಂದಿಕೂರು ಫ್ಯಾಕ್ಟರಿಯಲ್ಲಿ ಕೆಲಸ |
| ವಾಸ | ಃ | ನಂದಿಕೂರು |

ದಿನಾಂಕ **: 28.03.2025** ರಂದು ಪಿಡಬ್ಲ್ಯೂ - 9/ಸಿಡಬ್ಲ್ಯೂ - 5 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

2020 ರಲ್ಲಿ ನಾನು ಅಜೆಕಾರಿನ ಸೌತ್ ಇಂಡಿಯಾ ಕ್ಯಾಶ್ಯೂ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೆ. ಈಗ ನಾನು ನಂದಿಕೂರು ರಾಯಲ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಆ ಸಮಯದಲ್ಲಿ ಸುಮಾರು 40 ಜನ ಅಜೆಕಾರಿನ ಫ್ಯಾಕ್ಟರಿಯಲ್ಲಿ

ಕೆಲಸ ಮಾಡುತ್ತಿದ್ದರು. 2020 ರಲ್ಲಿ ನಾನು ಯಂತ್ರ ಚಾಲನೆ ಮಾಡುತ್ತಿದ್ದೆ. ಆ ಸಮಯದಲ್ಲಿ ಫ್ಯಾಕ್ಟರಿಯಲ್ಲಿ ಕಳ್ಳತನವಾಗಿದ್ದು, ಮರುದಿನ ಅಲ್ಲಿನ ಹೆಣ್ಣು ಮಕ್ಕಳು ಈ ವಿಚಾರವನ್ನು ನನಗೆ ತಿಳಿಸಿರುತ್ತಾರೆ. ಚಾಸಾ 1 ರವರು ಅದರ ಬಗ್ಗೆ ಪೋಲೀಸರರಿಗೆ ದೂರು ನೀಡಿದ್ದು, ನನ್ನನ್ನು ಸಹಾ ಠಾಣೆಗೆ ಕರೆಸಿ ವಿಚಾರಿಸಿರುತ್ತಾರೆ. ಅಂದಾಜು 100 ಕೆಜಿಯಷ್ಟು ಕ್ಯಾಶ್ಯೂ ಕಳ್ಳತನವಾಗಿರಬಹುದು. ಕಳ್ಳತನ ಹೇಗಾಯಿತು ಎಂದು ನನಗೆ ತಿಳಿದಿಲ್ಲ. ನಾನು ಒಂದು ಬಾರಿ ಮಾತ್ರ ಠಾಣೆಗೆ ಹೋಗಿರುತ್ತೇನೆ. ಠಾಣೆಯಲ್ಲಿ ಆರೋಪಿತರನ್ನು ನೋಡಿರುವುದಿಲ್ಲ. ಪೋಲೀಸರು ಆರೋಪಿತರನ್ನು ಫ್ಯಾಕ್ಟರಿಗೆ ಕರೆದುಕೊಂಡು ಬಂದಿದ್ದರು. ಅವರನ್ನು ನಾನು ನೋಡಿರುವುದಿಲ್ಲ. ನಂತರ ನಾನು ಠಾಣೆಗೆ ಹೋಗಿರುವುದಿಲ್ಲ. ಅಲ್ಲಿ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಹಿರಿಯ ಸ.ಸ.ಅ. ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.

<u>ಪಾಟೀ ಸವಾಲುಃ</u> ಹಿರಿಯ ಸ.ಸ.ಅ. ರವರಿಂದಃ

ದಿಃ 14.10.2020 ರಂದು ಬೆಳಗ್ಗಿನ ಜಾವಾ ಸುಮಾರು 2.30 ರ ಸಮಯದಲ್ಲಿ ಕಳ್ಳತನವಾಗಿರುತ್ತದೆ ಎಂದರೆ ಇರಬಹುದು. ಆ ಸಮಯದಲ್ಲಿ ಸುಮಾರು 125 ಕೇಜಿ ಗೇರುಬೀಜ ಕಳ್ಳತನವಾಗಿರುತ್ತದೆ ಎಂದರೆ ಇರಬಹುದು. ನಮ್ಮ ಫ್ಯಾಕ್ಟರಿಗೆ

ಎರಡು ಕಡೆ ಬಾಗಿಲುಗಳು ಇರುತ್ತದೆ ಎಂದರೆ ಸರಿ. ಕಳ್ಳರು ನಮ್ಮ ಫ್ಯಾಕ್ಟರಿಯ ಪಶ್ಚಿಮ ದಿಕ್ಕಿನಲ್ಲಿರುವಂತಹ ಬಾಗಿಲಿನ ಶೆಟರ್ ನ ಮೇಲ್ಬಾಗದ ಗೋಡೆಯಲ್ಲಿ ಇದ್ದಂತಹ ಜಾಗದಿಂದ ಒಳ ಪ್ರವೇಶಿಸಿ, ಅದೇ ಜಾಗದಿಂದ ಗೇರುಬೀಜವನ್ನು ಕಳವು ಮಾಡಿದ್ದಾರೆ ಎಂದು ನನಗೆ ತಿಳಿದಿದೆ ಎಂದರೆ ಸರಿಯಲ್ಲ. ನಂತರ ನಮ್ಮ ಮ್ಯಾನೇಜರ್ ರವರು ಸದರಿ ಸ್ಥಳವನ್ನು ಮುಚ್ಚಿಸಿರುತ್ತಾರೆ ಎಂದರೆ ಸರಿ. ದಿಃ 17.11.2020 ರಂದು 1 ಮತ್ತು ಆರೋಪಿತರನ್ನು ನಾವು ಕೆಲಸ ಮಾಡುತ್ತಿದ್ದ ಫ್ಯಾಕ್ಟರಿಗೆ ಕರೆತಂದಿದ್ದು, ಅವರನ್ನು ತೋರಿಸಿ, ಅವರುಗಳ ಹೆಸರುಗಳನ್ನು ಹೇಳಿ, ಗೇರುಬೀಜ ಫ್ಯಾಕ್ಟರಿಯಲ್ಲಿ ಪಶ್ಚಿಮ ದಿಕ್ಕಿನಲ್ಲಿ ಇರುವಂತಹ ಉತ್ತರ ಬದಿಗೆ ಬೀಗ ಹಾಕದೇ ಇದ್ದು, ಜಾಕ್ ನ ಸಹಾಯದಿಂದ ಶೆಟರನ್ನು ಮೇಲಕ್ಕೆ ಎತ್ತಿ, ಒಳ ಹೊಕ್ಕು ಗೇರುಬೀಜವನ್ನು ಕಳವು ಮಾಡಿದ್ದಾಗಿ ತೋರಿಸಿರುತ್ತಾರೆ ಎಂದರೆ ಸರಿ. ಅವರು 1 ಮತ್ತು 2ನೇ ಆರೋಪಿತರು ಎಂದರೆ ನನಗೆ ಗೊತ್ತಿಲ್ಲ. ಈಗ ನ್ಯಾಯಲಯದಲ್ಲಿ ಇರುವ ಇಬ್ಬರು ಆರೋಪಿತರಲ್ಲಿ ಒಬ್ಬರನ್ನು ಗುರುತಿಸಲು ಹೇಳಿದ್ದು, ನನಗೆ ಗುರುತಿಸಲು ಆಗುವುದಿಲ್ಲ. ಈಗ ನನಗೆ ನಿಪಿ - 10ನ್ನು ತೋರಿಸಿದ್ದು, ಅದರಲ್ಲಿ ಕಾಣುವಂತಹ ವ್ಯಕ್ತಿಗಳನ್ನು ಸದರಿ ದಿನ ನಮ್ಮ ಫ್ಯಾಕ್ಟರಿಗೆ ಕರೆಸಿರುತ್ತಾರೆ ಎಂದರೆ ಸರಿ. ಸದರಿ ದಿನ ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ ಎಂದರೆ ಸರಿ.

ನಂತರ ದಿಃ 05.01.2022 ರಂದು ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಅಲ್ಲಿ 3 ನೇ ಆರೋಪಿಯನ್ನು ನನಗೆ ತೋರಿಸಿದ್ದರು ಎಂದರೆ ಸರಿಯಲ್ಲ. ಅದರ ಬಗ್ಗೆ ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈಗ ನನಗೆ ಸದರಿ ಹೇಳಿಕೆಯನ್ನು ಓದಿ ಹೇಳಿದ್ದು, ಅದರಲ್ಲಿ ನಾನು ಹೇಳಿಕೆ ನೀಡಿರುವುದಿಲ್ಲ. ನನ್ನ ಸದರಿ ಹೇಳಿಕೆಯನ್ನು ನಿಪಿ - 13 ಎಂದು ಗುರುತಿಸಲಾಯಿತು. ನಾನು ಆ ದಿನ ಠಾಣೆಯಲ್ಲಿ ನೋಡಿದ ವ್ಯಕ್ತಿ ಈ ದಿನ ನ್ಯಾಯಾಲಯದಲ್ಲಿ 3 ನೇ ಆರೋಪಿಯಾಗಿ ಹಾಜರಿದ್ದಾರೆ ಎಂದರೆ ಸರಿಯಲ್ಲ. ನಾನು 3 ನೇ ಆರೋಪಿಯನ್ನು ನೋಡಿದ್ದರೂ ಸಹಾ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ ಪಿ.ಎ.ಎಸ್. 1 ನೇ ಆರೋಪಿತರ ಪರ ವಕೀಲರಿಂದಃ

ಕಳ್ಳತನ ಹೇಗೆ ಆಗಿದೆ ಎಂದು ನನಗೆ ವೈಯಕ್ತಿಕವಾಗಿ ತಿಳಿದಿರುವುದಿಲ್ಲ. ಮ್ಯಾನೇಜರ್ ಹೇಳಿರುವ ಪ್ರಕಾರ ನನಗೆ ಸದರಿ ವಿಚಾರವು ತಿಳಿದಿರುತ್ತದೆ. ನನಗೆ ಕನ್ನಡ ಸರಿಯಾಗಿ ಬರುವುದಿಲ್ಲ. ನಿಪಿ - 13 ರಲ್ಲಿ ಕನ್ನಡದಲ್ಲಿ ಬರೆದಿರುವ ಕಾರಣ, ಅದನ್ನು ಹಿಂದಿಗೆ ಭಾಷಾಂತರ ಮಾಡದ ಕಾರಣ, ಅದರಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿಲ್ಲ.

CC 11/2024
CW5
PW9

<u>ಪಾಟೀ ಸವಾಲುಃ</u> 2 ಮತ್ತು 3 ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಮೋದಿಸುತ್ತಾರೆ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.